# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಬಿಡಿ/2115-2021 ಪಿ.ಎ.ಆರ್.ಇ-1
ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 05-05-2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ: ಶ್ರೀ ಕೆ.ಆರ್.ರಂಗನಾಥ, ಆಹಾರ ಶಿರಸ್ತೆದಾರರು, ತಾಲ್ಲೂಕು ಕಚೇರಿ, ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ** – ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

----

1. ಪೋಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಕೋಲಾರ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಶ್ರೀ ಕೆ.ಆರ್.ರಂಗನಾಥ, ಆಹಾರ ಶಿರಸ್ತೆದಾರರು, ತಾಲ್ಲೂಕು ಕಚೇರಿ, ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) **ಶ್ರೀಮತಿ ಗಿರಿಜ ರೂಪ ರೇವತಿ, ಕೋಂ: ಕೆ.ಸುರೇಶ ಬಾಬು, ಮಾಲೀಕರು, ಶ್ರೀ ರೇವತಿ ಭಾರತ್ ಗ್ಯಾಸ್ ಡಿಸ್ಟ್ರಿಬ್ಯೂಟರ್ಸ್, ಬಂಗಾರಪೇಟೆ, ಬ್ಯೂ ಟೌನ್, ಬಂಗಾರಪೇಟೆ ಟೌನ್, ಕೋಲಾರ ಜಿಲ್ಲೆ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. <u>**ದೂರಿನ ಸಂಕ್ಷಿಪ್ತ ವರದಿ :**</u> ದೂರುದಾರರು ತಮ್ಮ ದೂರಿನಲ್ಲಿ, ದಿನಾಂಕ: 21-01-2017 ರಂದು ಎದುರುದಾರರು ಯಾರೋ ಒಬ್ಬ ವ್ಯಕ್ತಿಯನ್ನು ಕರೆದುಕೊಂಡು ಬಂದು, ದೂರುದಾರರಿಗೆ ಆತನನ್ನು ಪರಿಚಯಿಸಿ, ಆತ ರೈತ ಸಂಘದಲ್ಲಿ ಅಧ್ಯಕ್ಷರಾಗಿರುತ್ತಾರೆ ಹಾಗೂ ಭಾರತ್ ಗ್ಯಾಸ್ ಏಜೆನ್ಸಿ ಯಲ್ಲಿ ಹೊಸ ಕನೆಕ್ಷನ್ ಗಳಿಗೆ ಸರ್ಕಾರವು ನಿಗದಿಪಡಿಸಿರುವ ಶುಲ್ಕಕ್ಕಿಂತ ಹೆಚ್ಚಿನ ಹಣ ವಸೂಲು ಮಾಡುತ್ತಿರುವುದಾಗಿ, ಸರ್ಕಾರದಿಂದ ಬಡವರಿಗೆ ಉಚಿತವಾಗಿ ನೀಡಬೇಕಾಗಿರುವ ಗ್ಯಾಸ್ ಕನೆಕ್ಷನ್‌ಗಳಿಗೆ

ಹಣವನ್ನು ಪಡೆದಿರುವುದಾಗಿ ಮತ್ತು ದೂರುದಾರರ ಕಂಪನಿಯ ಗ್ಯಾಸ್ ಸಿಲಿಂಡರ್‌ಗಳು ಅನಧಿಕೃತ ರೀಫಿಲಿಂಗ್‌ಗಳಲ್ಲಿ ಹೆಚ್ಚಾಗಿ ಉಪಯೋಗಿಸುತ್ತಿರುವುದಾಗಿ ದೂರು ಅರ್ಜಿಯನ್ನು ಎದುರುದಾರರ ಕಚೇರಿ ಯಾದ ಬಂಗಾರಪೇಟೆ ತಾಲ್ಲೂಕು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಶಿರಾಸ್ತೆದಾರ್ ಇವರಿಗೆ ಬಂದಿರುತ್ತದೆ ಹಾಗೂ ಗ್ಯಾಸ್ ಏಜೆನ್ಸಿ ವಿರುದ್ಧ ಬಳಕೆದಾರರು ಧರಣಿ ನಡೆಸುವುದಾಗಿ ದೂರುದಾರರಿಗೆ ತಿಳಿಸಿದಾಗ, ಅವರು ಗ್ಯಾಸ್ ಏಜೆನ್ಸಿ ಮೇಲಿನ ಅಪಾದನೆಗಳು ಸುಳ್ಳಾಗಿರುತ್ತದೆ ಹಾಗೂ ಧರಣಿಯನ್ನು ಕೈಬಿಡಲು ಮತ್ತು ಅಪಾದನೆಗಳನ್ನು ಮುಕ್ತಾಯಗೊಳಿಸಲು ಕೋರಿಕೊಂಡಿರುತ್ತಾರೆ. ನಂತರ, ಎದುರುದಾರರು, ದೂರುದಾರರ ವಿರುದ್ಧ ಇರುವ ಮೇಲ್ಕಂಡ ಅಪಾದನೆಗಳನ್ನು ಮುಕ್ತಾಯಗೊಳಿಸಲು ದೂರುದಾರರಿಗೆ ಲಂಚದ ಹಣ 25,000/- ದಿಂದ 30,000/- ರೂ.ಗಳ ಹಣ ನೀಡುವಂತೆ ಬೇಡಿಕೆ ಇಟ್ಟಿರುತ್ತಾರೆ. ದೂರುದಾರರು ಎದುರುದಾರರಿಗೆ ಅಷ್ಟು ಹಣ ನೀಡಲು ಸಾಧ್ಯವಿಲ್ಲ, ಸ್ವಲ್ಪ ಕಡಿಮೆ ಮಾಡಿಕೊಳ್ಳಿ ಎಂದು ತಿಳಿಸಿರುತ್ತಾರೆ. ಸದರಿ ಸಂಭಾಷಣೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ದಾಖಲಿಸಿಕೊಂಡಿರುತ್ತಾರೆ. ಎದುರುದಾರರಿಗೆ ಲಂಚದ ಹಣ ನೀಡಲು ಇಷ್ಟವಿಲ್ಲದೆ ಇದ್ದುದರಿಂದ ದೂರುದಾರರು ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹ ದಳ, ಕೋಲಾರ, ಇವರಿಗೆ ದಿನಾಂಕ: 23-01-2016 ರಂದು ದೂರು ನೀಡಿದ್ದು, ಜೊತೆಯಲ್ಲಿ ಲಂಚದ ಬೇಡಿಕೆ ಸಂಭಾಷಣೆ ಇದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ನಂತರ ಸದರಿ ದೂರು ಮೊ.ಸಂಖ್ಯೆ: 01/2017 ರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ಕಲಂ 7,13(1)(ಡಿ) ಸ/ವಾ 13(2) ಅಡಿಯಲ್ಲಿ ಪ್ರಕರಣ ದಾಖಲು ಮಾಡಿಕೊಂಡಿರುತ್ತಾರೆ.

3. ದಿನಾಂಕ: 23-01-2017 ರಂದು, ತನಿಖಾಧಿಕಾರಿಯವರು ಪಂಚರಾದ ಶ್ರೀ ಮುನಿನಾರಾಯಣ, ಪಂಚ-1, ಶ್ರೀ ಎಂ.ಸಿ.ರಾಮಕೃಷ್ಣ, ಪಂಚ-2, ಇವರನ್ನು ಬರಮಾಡಿಕೊಂಡು, ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 10000/- (ಹಣದ ಡಿನಾಮಿನೇಷನ್ 2000/- x 5) ಗಳನ್ನು ಹಾಗೂ ಲಂಚದ ಹಣಕ್ಕೆ ಬೇಡಿಕೆ ಇದ್ದ ಸಂಭಾಷಣೆ ದಾಖಲಾಗಿದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ಪಂಚರುಗಳು ಹಣದ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿರುತ್ತಾರೆ. ನಂತರ ತನಿಖಾಧಿಕಾರಿ ಸೂಚನೆಯ ಮೇರೆಗೆ ಪಂಚ-2 ಶ್ರೀ ಎಂ.ಸಿ.ರಾಮಕೃಷ್ಣ, ಇವರು ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಲೀನ್ ಪೌಡರ್ ಲೇಪಿಸಿದ 10,000/- ರೂ.ಗಳ ಹಣವನ್ನು ಎಣಿಸಿ, ದೂರುದಾರರ ವ್ಯಾನಿಟಿ ಬ್ಯಾಗ್‌ನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಗೆ ನಿಗಧಿತ ಸೂಚನೆಯನ್ನು ನೀಡಿ, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದಾಗ, ದೂರುದಾರರು ತನ್ನ ತಲೆಯನ್ನು ಕೈಯಿಂದ ಸವರುವ ಮೂಲಕ ಸನ್ನೆ ಮಾಡಿ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ ಹಾಗೂ ಇವರ ಜೊತೆ ನೆರಳು ಸಾಕ್ಷಿ ಪಂಚ-1 ಶ್ರೀ ಮುನಿನಾರಾಯಣ ಇವರು ದೂರುದಾರರ ಜೊತೆಗೆ ಇದ್ದು, ಘಟನೆಯನ್ನು ಗಮನಿಸಬೇಕೆಂದು ತಿಳಿಸಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿ ವಹಿಸುವಿಕೆ ಪಂಚನಾಮೆಯನ್ನು ಪಂಚರ ಸಮಕ್ಷಮ 3.15 ರಿಂದ ಮಧ್ಯಾಹ್ನ 4.00 ಘಂಟೆಯವರೆಗೆ ಬರೆದಿರುತ್ತಾರೆ.

4. ದಿನಾಂಕ: 23-1-2017 ರಂದು ತನಿಖಾಧಿಕಾರಿ, ಸಿಬ್ಬಂದಿ, ದೂರುದಾರರು, ಇವುರುಗಳು ದೂರುದಾರರ ಗ್ಯಾಸ್ ಏಜೆನ್ಸಿ ಬಳಿ 17.00 ಗಂಟೆಗೆ ತಲುಪಿರುತ್ತಾರೆ. ನಂತರ ದೂರುದಾರರು ಎದುರುದಾರಿಗೆ ಪೋನ್ ಮಾಡಿ ಸಂಪರ್ಕಿಸಿದಾಗ ಎದುರುದಾರರು ಗ್ಯಾಸ್ ಡಿಸ್ಟ್ರಿಬ್ಯೂಟರ್ಸ್ ಕಚೇರಿಗೆ ಬರುವುದಾಗಿ ತಿಳಿಸಿರುತ್ತಾರೆ. ದೂರುದಾರರು ಕಚೇರಿಯ ಒಳಗಿನ ಕೊಠಡಿಯಲ್ಲಿ ಕುಳಿತಿದ್ದಾಗ ಸ್ವಲ್ಪ ಸಮಯದ ನಂತರ ಎದುರುದಾರರು ಕಚೇರಿಯನ್ನು ಪ್ರವೇಶಿಸಿದಾಗ, ಅವರನ್ನು ಕುಳಿತುಕೊಳ್ಳುವಂತೆ ದೂರುದಾರರು ತಿಳಿಸಿದಾಗ, ಆಗ ಎದುರುದಾರರು ತನಗೆ ಟೈಮ್ ಆಗಿದೆ, ಟ್ರೈನ್‌ಗೆ ಹೋಗಬೇಕು, ಬೇಗ ಕೊಡಿ ಎಂದು ಕೇಳಿದಾಗ, ದೂರುದಾರರು ತನ್ನ ಬಳಿ ಇದ್ದ ಪಿನಾಪ್ತಲಿನ್ ಪೌಡರ್ ಲೇಪಿತ ರೂ.10,000/- ಲಂಚದ ಹಣವನ್ನು ಎದುರುದಾರರಿಗೆ ನೀಡಿದಾಗ, ಅವರು ತನ್ನ ಬಲಗೈಯಿಂದ ನೋಟುಗಳನ್ನು ಪಡೆದು ಎರಡೂ ಕೈಗಳಿಂದ ಎಣಿಸಿ ತನ್ನ ಶರ್ಟನ ಎಡ ಭಾಗದ ಒಳ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ದೂರುದಾರರು ತನಿಖಾಧಿಕಾರಿಗೆ ನಿಗಧಿತ ಸೂಚನೆ ನೀಡಿದ ನಂತರ ತನಿಖಾಧಿಕಾರಿಯವರು ಸ್ಥಳಕ್ಕೆ ಬಂದಾಗ, ದೂರುದಾರರು ತನಿಖಾಧಿಕಾರಿಗೆ ಎದುರುದಾರರನ್ನು ತೋರಿಸಿಕೊಟ್ಟ ಮೇರೆಗೆ ತನಿಖಾಧಿಕಾರಿ ತನ್ನನ್ನು ಪರಿಚಯಿಸಿಕೊಂಡು, ಎದುರುದಾರರ ವಿರುದ್ಧ ಪ್ರಕರಣ ದಾಖಲಾದ ಬಗ್ಗೆ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿ ತನಿಖೆಯನ್ನು ಮುಂದುವರೆಸಿ, ಎದುರುದಾರರ ಎರಡೂ ಕೈ ಗಳನ್ನು ಸೋಡಿಯಂ ಕಾರ್ಬೋನೈಟ್ ದ್ರಾವಣದಿಂದ ಪ್ರತ್ಯೇಕವಾಗಿ ತೊಳೆಸಿದಾಗ, ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ, ಹಾಗೂ ತನಿಖಾಧಿಕಾರಿಯವರು ಎದುರುದಾರರಿಗೆ ಲಂಚದ ಹಣವನ್ನು ಹಾಜರುಪಡಿಸುವಂತೆ ಸೂಚಿಸಿದಾಗ ಅವರು ತನ್ನ ಶರ್ಟನ ಎಡಭಾಗದ ಒಳಜೇಬಿನಲ್ಲಿದ್ದ ಹಣವನ್ನು ಹಾಜರುಪಡಿಸಿದ್ದು, ಸದರಿ ಹಣವನ್ನು ತನಿಖಾಧಿಕಾರಿ ಸೂಚನೆ ಮೇರೆಗೆ ಪಂಚ-1 ಪರಿಶೀಲಿಸಿ, ನೋಟಿನ ಮೌಲ್ಯ ಮತ್ತು ನಂಬರುಗಳನ್ನು ಖಾತ್ರಿಪಡಿಸಿಕೊಂಡಿರುತ್ತಾರೆ ಹಾಗೂ ಶರ್ಟನ ಎಡಭಾಗದ ಒಳಜೇಬಿನ ಭಾಗವನ್ನು ಸೋಡಿಯಂ ಕಾರ್ಬೋನೈಟ್ ದ್ರಾವಣದಿಂದ ತೊಳೆದಾಗ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ಶರ್ಟನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

5. ನಂತರ ತನಿಖಾಧಿಕಾರಿಯವರು ಎದುರುದಾರರನ್ನು ಸಮಜಾಯಿಷಿ ಕೇಳಿದಾಗ, ಅವರು ...**"ನಾನು ಈ ದಿನ ಸಂಜೆ ಸುಮಾರು 4-45 ರಿಂದ 5.00 ಪಿ.ಎಂ. ವೇಳೆಯಲ್ಲಿ ನನ್ನ ಮೊಬೈಲ್‌ಗೆ ಭಾರತ್ ಗ್ಯಾಸ್ ಕಂಪೆನಿಯ ಮಾಲೀಕರಾದ ಶ್ರೀಮತಿ ಗಿರಿಜಾ ರೂಪಾ ರೇವತಿ ರವರು ಕರೆ ಮಾಡಿ, ತಮ್ಮ ಕಚೇರಿಗೆ ಬರುವಂತೆ ಕೋರಿರುತ್ತಾರೆ. ಕಾರಣ ಗ್ಯಾಸ್ ಲಿಂಕಿಂಗ್ ಪಟ್ಟಿ ಮತ್ತು ಆರ್.ಟಿ.ಐ ಅರ್ಜಿ ತಮ್ಮ ಕಂಪನಿಯ ಬೆಲೆ ಹೆಚ್ಚಿಗೆ ಪಡೆಯುತ್ತಿರುವ ಬಗ್ಗೆ ಮತ್ತು ಡಿಪಾಸಿಟ್ ಹಣ ಪಡೆಯುತ್ತಿರುವ ಬಗ್ಗೆ ಅರ್ಜಿಯ ಬಗ್ಗೆ ವಿಚಾರಣೆ ಮಾಡಿಕೊಂಡಿರುತ್ತಾರೆ. ಅಲ್ಲದೇ ಸದರಿ ವಿರುದ್ಧ ಏನಾದರೂ ಅಂಶ ಬಂದಿದೆಯೇ ಎಂಬ ಬಗ್ಗೆ ವಿಚಾರಣೆ ಮಾಡಿಕೊಂಡಿರುತ್ತಾರೆ. ಅಲ್ಲದೇ ಸದರಿ ಮಾಲೀಕರು ಕೇಳಿದ ಈ ಪ್ರಶ್ನೆಗಳಿಗೆ ನಾನು ನಿಮ್ಮ ವಿರುದ್ಧ ಯಾವುದೇ ಮುಷ್ಕರ ನಡೆಸಿರುವುದಿಲ್ಲ. ಕೇವಲ ಕಸ ವಿಲೇವಾರಿ ವಿಷಯದ ಬಗ್ಗೆ ಮಾಡಿರುತ್ತಾರೆ ಎಂಬುದಾಗಿ ತಿಳಿಸಿರುತ್ತೇನೆ. ಅಲ್ಲದೇ ಸದರಿಯವರು ಸಾರ್, ತಾವು ನಮಗೆ ಬಹಳ ಉಪಕಾರ ಮಾಡಿರುತ್ತೀರಿ, ನಿಮಗೆ**

ನಾನು ಚಿರಋಣಿಗಳು ಎಂಬುದಾಗಿ ತಿಳಿಸಿರುತ್ತಾರೆ. ತದನಂತರ ಶ್ರೀಮತಿ ರವರು ಸಾರ್ ನೀವು ನಿನ್ನೆ ದಿನ ಅಂದರೆ ಶನಿವಾರದಂದು ಎರಡು ಸ್ಟೌವ್ ಕೊಳ್ಳಲು ನೀಡಿದ್ದ ಹಣವನ್ನು ತೆಗೆದುಕೊಳ್ಳಿ ಎಂದು ಹೇಳಿ ಹಣವನ್ನು ತೆಗೆದುಕೊಳ್ಳಿ ಎಂದು ಹೇಳಿ ಹಣವನ್ನು ಕೊಡಲು ಬಂದಾಗ ನಾನು ಪರವಾಗಿಲ್ಲ ಅಮ್ಮ ಹೊಸದಾಗಿ ತರಿಸಿಕೊಡಿ ಎಂದು ತಿಳಿಸಿ ನಿರಾಕರಿಸಿರುತ್ತೇನೆ. ನಾನು ನನ್ನ ಕಚೇರಿಯ ಆಹಾರ ನಿರೀಕ್ಷಕರು ಮತ್ತು ಮರಗಲ್ ಶ್ರೀನಿವಾಸ್ ರವರ ಸಮಕ್ಷಮದಲ್ಲಿ ಎರಡು ಗ್ಯಾಸ್ ಸ್ಟವ್ ಕೊಳ್ಳಲು ಅಂದಿನ ದಿನವೇ ಹತ್ತು ಸಾವಿರ ರೂಗಳನ್ನು ಕೊಟ್ಟಿರುತ್ತೆ. ಅದರ ಮಾಲೀಕರು ಹಿಂದಿರುತಿಸಿರುತ್ತಾರೆ. ಸದರಿಯವರು ಹಣ ಕೊಡಲು ಬಂದಾಗ ನಾನು ಪರವಾಗಿಲ್ಲ ತರಿಸಿ ಕೊಡಿ ಎಂದು ತಿಳಿಸಿ ನಿರಾಕರಿಸಿದಾಗ, ನಾನು ಊರಿನಲ್ಲಿ ಇರುವುದಿಲ್ಲ ಹಣ ವಾಪಸ್ಸು ಪಡೆಯಿರಿ, ಸ್ಟವ್ ಕೊಡುವಾಗ ಪಡೆಯುತ್ತೇನೆ ಎಂದು ತಿಳಿಸಿರುತ್ತಾರೆ. ನಾನು ನನಗೆ ಮತ್ತು ಸ್ನೇಹಿತರಿಗೆ ಎರಡು ಗ್ಯಾಸ್ ಸ್ಟವ್ ನಾಲ್ಕು ಬರ್ನಲ್‌ನ ಎರಡು ಗ್ಲಾಸ್ ಫಿನಿಷಿಂಗ್ ಇರುವುದು ಮಾರಾಟ ದರ **4500/-** ರಿಂದ **5000/-** ರೂ ಆಗಿರುತ್ತದೆ ಎಂಬುದಾಗಿ ಮಾಲೀಕರು ತಿಳಿಸಿದ್ದು, ಈ ಬಗ್ಗೆ ನಾನು ಹಣ ಹತ್ತು ಸಾವಿರ ರೂ.ಗಳನ್ನು ಅವರಿಗೆ ನೀಡಿರುತ್ತೇನೆ. ಈ ಬಗ್ಗೆ ಅವರನ್ನು ರಶೀದಿ ಕೇಳಿದಾಗ ಮಾಲನ್ನು ನೀಡುವಾಗ ಬಿಲ್ ಕೊಡುತ್ತೇನೆ ನಮ್ಮ ಮೇಲೆ ನಿಮಗೆ ನಂಬಿಕೆ ಇಲ್ಲವೇ ಎಂದು ತಿಳಿಸಿರುತ್ತಾರೆ. ದಿನಾಂಕ: **21-01-2017**ರ ಶನಿವಾರ ಸುಮಾರು **04.00** ಗಂಟೆಯ ಸಮಯದಲ್ಲಿ ಗ್ಯಾಸ್ ಕನೆಕ್ಷನ್ ಮತ್ತು ಉಚಿತ ಗ್ಯಾಸ್ ವಿತರಣೆ ಬಿಪಿಎಲ್ ಮತ್ತು ಎಎವೈ ಪ.ಚೀ ಗಳಿಗೆ ವಿತರಣೆಯ ಬಗ್ಗೆ ಮಾಹಿತಿ ಪಡೆಯಲು ನಮ್ಮ ಸಿಬ್ಬಂದಿ ಆಹಾರ ನಿರೀಕ್ಷಕರೊಂದಿಗೆ ಬಂದಿದ್ದಾಗ ನೀಡುತ್ತೇನೆ. ಸದರಿ ಸಮಯದಲ್ಲಿ ಮರಗಲ್ ಶ್ರೀನಿವಾಸ್ ರವರು ಆಕಸ್ಮಿಕವಾಗಿ ಬಂದಿದ್ದು, ಈ ಸಮಯದಲ್ಲಿ ಹಾಜರಿರುತ್ತಾರೆ. ಈ ಈರ್ವರ ಸಮಕ್ಷಮದಲ್ಲಿ ನನ್ನ ಗೃಹ ಉಪಯೋಗಕ್ಕೆ ಸ್ಟವ್ ತೆಗೆದುಕೊಳ್ಳಲು ನೀಡಿರುತ್ತೇನೆ. ಸದರಿಯವರು ಯಾವುದೇ ರೀತಿಯ ರಸೀದಿಯ ಬಿಲ್ ನೀಡಿರುವುದಿಲ್ಲ. ಈ ಸಮಯದಲ್ಲಿ ನೀಡದ ಹಣವನ್ನು ಅವರೇ ಖುದ್ದು ವಾಪಸು ನೀಡಿರುತ್ತಾರೆ. ನಾನು ಸದರಿ ಶ್ರೀಮತಿ ಮಾಲೀಕರಿಂದ ಯಾವುದೇ ರೀತಿಯಲ್ಲಿ ಲಂಚ ಹಣಕ್ಕಾಗಿ ಒತ್ತಾಯ ಮಾಡಿರುವುದಿಲ್ಲ ಮತ್ತು ಅವರಿಗೆ ಯಾವುದೇ ರೀತಿಯ ಕಾನೂನು ವಿರುದ್ದವಾಗಿ ಸಹಾಯ ಮಾಡಲು ಲಂಚ ರುಷುವತ್ತು ಸ್ವೀಕರಿಸಿರುವುದಿಲ್ಲ ಎಂಬುವುದಾಗಿ ಸಮಜಾಯಿಷಿ ನೀಡಿರುತ್ತಾರೆ. ಈ ಸಂಬಂಧವಾಗಿ ದೂರುದಾರರು ಮತ್ತು ಪಂಚ ಸಾಕ್ಷಿರವರನ್ನು ತನಿಖಾಧಿಕಾರಿಯವರು ಕೇಳಲಾಗಿ ಎದುರುದಾರರ ಸಮಾಜಾಯಿಷಿಯನ್ನು ಸುಳ್ಳೆಂದು, ದೂರುದಾರರಿಂದ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಪಡೆದಿರುತ್ತಾರೆಂದು ಹೇಳಿರುತ್ತಾರೆ. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿಯವರು ಟ್ರಾಪ್ ಪಂಚನಾಮೆಯನ್ನು ಸಂಜೆ 18.30 ರಿಂದ 22.30 ಗಂಟೆಯವರೆಗೆ ಪಂಚರ ಸಮಕ್ಷಮ ಬರೆದಿರುತ್ತಾರೆ.

6. ಸಿಡಿಗಳಲ್ಲಿ ದಾಖಲಾದ ಸಂಭಾಷಣೆ, ದೂರುದಾರರ ಹಾಗೂ ಎದುರುದಾರರ ನಿಮ್ಮ ಧ್ವನಿಗೆ ಹಾಗೂ ನಿಮ್ಮ ಮಾದರಿ ಧ್ವನಿಗೆ ಹೋಲಿಕೆ ಇರುವುದಾಗಿ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಿಂದ ದೃಢಪಟ್ಟಿದೆ.

7. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ನಿಮ್ಮಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಿಲೀನ್ ಅಂಶ ಇರುವುದು ದೃಢಪಟ್ಟಿದೆ.

8. ಗೌರವಾನ್ವಿತರ ಆದೇಶದ ಅನ್ವಯ ಎದುರುದಾರರಿಗೆ ದಿ: 22/09/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರು ತನ್ನ ವಿವರಣೆಯನ್ನು ದಿ: 06/11/2021 ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, ಎ.ಪಿ.ಎಲ್, ಬಿ.ಪಿ.ಎಲ್ ಕಾರ್ಡ್ ಹೊಂದಿರುವವರಿಗೆ ರಿಯಾಯಿತಿ ದರದಲ್ಲಿ ಅನಿಲ ಸಂಪರ್ಕ ನೀಡಿದ ಸಮಯದಲ್ಲಿ ಅಂತಹ ಪಡಿತರ ಚೀಟಿಗಳನ್ನು ಅನಿಲ ಪಡಿತರ ಚೀಟಿ ಎಂದು ಪರಿಗಣಿಸಿ ಸೀಮೆ ಎಣ್ಣೆ ಹಂಚಿಕೆಯನ್ನು ತಡೆಹಿಡಿಯುವ ಕರ್ತವ್ಯ ಎದುರುದಾರರದು ಆಗಿರುತ್ತದೆ. ಹಾಗೂ ಆ ಸಂಬಂಧವಾಗಿ ಮೇಲ್ವಿಚಾರಣೆಯು ಸಹ ಎದುರುದಾರರಾಗಿರುತ್ತದೆ. ದೂರುದಾರರಿಂದ ಯಾವುದೇ ಲಂಚ ರುಷುವತ್ತುಗಳಿಗೆ ಬೇಡಿಕೆ ಇಟ್ಟಿರುವುದಿಲ್ಲ, ಆದರೆ ಔಪಚಾರಿಕವಾಗಿ ಚರ್ಚಿಸಿರುತ್ತೇನೆಂದು ದೂರುದಾರರೆ ತನ್ನ ಮೊಬೈಲ್ ನಿಂದ ಎದುರುದಾರರಿಗೆ ಕರೆ ಮಾಡಿ, ಕಛೇರಿಗೆ ಹೋಗಿ ಬರಲು ಮನವಿ ಮಾಡಿಕೊಂಡಿರುತ್ತಾರೆ. ಆದರೆ, ಎದುರುದಾರರ ಬಳಿ ದೂರುದಾರರಿಗೆ ಸಂಬಂಧಿಸಿದ ಯಾವುದೇ ಕಡತ / ಪೈಲ್ ಇರುವುದಿಲ್ಲ ಎಂದು ಹೇಳಿರುತ್ತಾರೆ. ಎದುರುದಾರರು ದೂರುದಾರರ ಜೊತೆ ಹಣದ ವ್ಯವಹಾರಕ್ಕೆ ಸಂಬಂಧಿಸಿದ ಮಾತುಕತೆ ನಡೆಸಿರುವುದಿಲ್ಲ. ದೂರುದಾರರ ಆರೋಪದಲ್ಲಿ ನಿಜಾಂಶ ಇರುವುದಿಲ್ಲ. ದೂರುದಾರರ ಮೊಬೈಲ್ ಸಂಭಾಷಣೆಯಲ್ಲಿ ಹಣದ ಅಂಶ ಕಂಡುಬಂದಿರುವುದಿಲ್ಲ. ದಿ: 21/01/2017ರ ಅಂಶವನ್ನು ದೂರುದಾರರು ಉದ್ದೇಶಪೂರ್ವಕವಾಗಿ ಸಂಚು ರೂಪಿಸಿದ ಕ್ರಮವಾಗಿರುತ್ತದೆ. ದೂರುದಾರರಿಂದ ಯಾವುದೇ ಅಮಿಷಕ್ಕೆ ಬೇಡಿಕೆ ಇಟ್ಟಿರುವುದಿಲ್ಲ. ದಿ: 23/1/2017 ರಂದು ದೂರುದಾರರ ಪೋನ್ ಕರೆ ಮೇರೆಗೆ ತಾನು ಸ್ಥಳಕ್ಕೆ ಬಂದಿದ್ದು, ಹಾಗೂ ತಾನು ಗ್ಯಾಸ್ ಸ್ಟೌವ್ ಖರೀದಿಗೆ ನೀಡಿದ ಹಣವೆಂದು ಭಾವಿಸಿ, ತಾನು ಮುಂಗಡ ನೀಡಿದ ಹಣ ಎಂದು ಭಾವಿಸಿ ವಾಪಸ್ಸು ಪಡೆದಿರುವುದಾಗಿ ಹೇಳಿರುತ್ತಾರೆ. ಎದುರುದಾರರು ದೂರುದಾರರಿಂದ ಯಾವುದೇ ಲಂಚದ ಹಣಕ್ಕೆ ಬೇಡಿಕೆ ಇಟ್ಟಿಲ್ಲ ಹಾಗೂ ಪಡೆದಿಲ್ಲವೆಂದು ತನ್ನ ವಿರುದ್ಧ ಪ್ರಕರಣವನ್ನು ಕೈಬಿಡಬೇಕೆಂದು ಕೋರಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿಕೆಯನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಹಾಗಾಗಿ ಅವರ ವಿರುದ್ಧ ಇಲಾಖಾ ವಿಚಾರಣೆ ಮಾಡದೆ ಇರಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ಮೇಲ್ನೋಟಕ್ಕೆ ದುರ್ನಡತೆ ಕಂಡು ಬರುತ್ತದೆ.

9. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

10. ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ಪಾಲಿಸದೆ, ಕರ್ತವ್ಯ ಶ್ರದ್ಧೆಯನ್ನು ಹೊಂದಿರದೆ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸುತ್ತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 2021) ನಿಯಮ 3(1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

05/05/2022

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತರು-2
ಕರ್ನಾಟಕ ರಾಜ್ಯ, ಬೆಂಗಳೂರು